# ವ್ಯಾಕುಲತೆ



**ಸಾಧು**ಸಂಗದಿಂದ ಭಗವಂತನಲ್ಲಿ ಅನುರಾಗ ಹುಟ್ಟುತ್ತದೆ. ಆತನನ್ನು ಪ್ರೀತಿಸುವಂತೆ ಮಾಡುತ್ತದೆ. ವ್ಯಾಕುಲತೆ ಉಂಟಾಗದಿದ್ದರೆ ಏನೂ ದೊರಕದು. ಸಾಧುಸಂಗ ಮಾಡುತ್ತಾ ಮಾಡುತ್ತಾ ಭಗವಂತನಿಗಾಗಿ ಪ್ರಾಣ ವ್ಯಾಕುಲ ಪಡಲಾರಂಭಿಸುತ್ತದೆ. ಮನೆಯಲ್ಲಿ ಯಾರಿಗಾದರೂ ಅಸೌಖ್ಯವಾದರೆ ಆತನನ್ನು ಗುಣಪಡಿಸುವುದು ಹೇಗೆ ಎಂಬುದಾಗಿ ಸರ್ವದಾ ಮನಸ್ಸು ವ್ಯಾಕುಲಪಡುತ್ತಾ ಇರುತ್ತದೆಯಲ್ಲಾ ಹಾಗೆ. ಕೆಲಸ ಕಳೆದುಕೊಂಡ ವ್ಯಕ್ತಿ ಯಾವ ರೀತಿ ವ್ಯಾಕುಲತೆಯಿಂದ ಒಂದು ಆಫೀಸಿನಿಂದ ಇನ್ನೊಂದು ಆಫೀಸಿಗೆ ಅಲೆಯುತ್ತಾ ಇರುತ್ತಾನೊ ಹಾಗೆ. ಇವೊತ್ತು ಯಾವುದಾದರೂ ಒಂದು ಆಫೀಸಿನಲ್ಲಿ ಕೆಲಸ ಖಾಲಿ ಇಲ್ಲ ಎಂದು ತಿಳಿಸಿದರೆ, ಮಾರನೆ ದಿನ ಮತ್ತೆ ಹೋಗಿ ವಿಚಾರ ಮಾಡುತ್ತಾನೆ: 'ಇಂದು ಯಾವುದಾದರೂ ಕೆಲಸ ಖಾಲಿ ಬಿದ್ದಿರುವುದೇ?'

ವ್ಯಾಕುಲನಾಗಿ ಪ್ರಾರ್ಥನೆ ಮಾಡಬೇಕು. ಭಗವಂತ ನಮ್ಮ ಸ್ವಂತದವ. ನಾವು ಆತನಿಗೆ ಹೇಳಬೇಕು : 'ಹೇ ಭಗವಂತ ನಿನ್ನ ಸ್ವರೂಪ ಎಂಥದು? ತೋರಿಸು ಅದನ್ನು ನನಗೆ. ನೀನು ತೋರಿಸಲೇ ಬೇಕು. ಇಲ್ಲದಿದ್ದರೆ ನನ್ನನ್ನು ಯಾಕೆ ಸೃಷ್ಟಿಸಿದೆ?' ಕೆಲವು ಸಿಖ್ಖರು ಒಮ್ಮೆ ನನಗೆ ತಿಳಿಸಿದರು. 'ಭಗವಂತ ದಯಾಮಯ' ಎಂದು. ನಾನು ಹೇಳಿದೆ : 'ದಯಾಮಯ ಅಂತ ಏಕೆ ಹೇಳಬೇಕು ಆತನನ್ನು? ಆತ ನಮ್ಮನ್ನು ಸೃಷ್ಟಿಸಿದ್ದಾನೆ. ನಮಗೆ ಶ್ರೇಯಸ್ಸನ್ನು ತರಲು ಆತ ಪ್ರಯತ್ನಿಸಿದರೆ ಅದಕ್ಕಾಗಿ ಆಶ್ಚರ್ಯ ಪಡುವುದೇನಿದೆ? ತಂದೆ ತಾಯಿಗಳು ಮಕ್ಕಳನ್ನು ಬೆಳೆಸುತ್ತಾರೆ. ಅದೇನು ದಯೆಯ ಕಾರ್ಯವೆ? ಅವರು ಹಾಗೆ ಮಾಡಲೇಬೇಕು.' ಆದ್ದರಿಂದ ನಾವು ಆತನನ್ನು ಬಲಾತ್ಕರಿಸಿ ಕೇಳಬೇಕು. ಆತ ನಮ್ಮ ತಂದೆ ತಾಯಿ ಅಲ್ಲವೆ? ಮಗ ಅನ್ನ ನೀರು ಬಿಟ್ಟು ತನ್ನ ಹಿಸ್ಸೆ ಬೇಕೆಂದರೆ, ದೊಡ್ಡವನಾಗಲು ಇನ್ನೂ ಮೂರು ವರ್ಷವಿದೆ ಎನ್ನುವಾಗಲೇ ತಂದೆ ತಾಯಿಗಳು ಆತನ ಹಿಸ್ಸೆ ಕೊಟ್ಟುಬಿಡುತ್ತಾರೆ. ಅಥವಾ ಮಗು ಕಾಸು ಕೇಳುವಾಗ ಮತ್ತೆ ಮತ್ತೆ ಕೇಳಲಾರಂಭಿಸಿದರೆ: 'ಅಮ್ಮಾ, ನಿನ್ನ ಕಾಲಿಗೆ ಅಡ್ಡ ಬೀಳುತ್ತೇನಮ್ಮ. ನನಗೆರಡು ಕಾಸು ಕೊಡಮ್ಮಾ!' ತಾಯಿ ಆತನ ವ್ಯಾಕುಲತೆ ನೋಡಿ ಇನ್ನು ತಡೆಯಲಾರದೆ ಆ ಕಾಸು ಬಿಸಾಡಿಬಿಡುತ್ತಾಳೆ.

ತೀವ್ರ ವ್ಯಾಕುಲತೆ ಬೇಕು. ತೀವ್ರ ವ್ಯಾಕುಲತೆಯುಂಟಾದರೆ ಇಡೀ ಮನಸ್ಸು ಭಗವಂತನಲ್ಲಿ ಏಕಾಗ್ರಗೊಂಡುಬಿಡುತ್ತದೆ.

ಒಬ್ಬನಿಗೆ ಒಬ್ಬಳು ಮಗಳಿದ್ದಳು. ಬಹಳ ಚಿಕ್ಕವಳಿರುವಾಗಲೆ ಆಕೆ ವಿಧವೆಯಾಗಿಬಿಟ್ಟಳು. ಆಕೆ ಪತಿಯನ್ನು ಅರಿತವಳೇ ಅಲ್ಲ. ತನ್ನ ಜೊತೆಗಾತಿಯರ ಪತಿಗಳನ್ನು ಕಂಡು ಒಂದು ದಿನ ಆಕೆ ತನ್ನ ತಂದೆಯನ್ನು ಕೇಳಿದಳು, 'ಅಪ್ಪ, ನನ್ನ ಪತಿ ಎಲ್ಲಿದ್ದಾರೆ?' ಆಕೆಯ ತಂದೆ ಹೇಳಿದ: 'ಗೋವಿಂದನೇ ನಿನ್ನ ಪತಿ. ಕರೆ, ಬರುತ್ತಾನೆ.' ಈ ಮಾತನ್ನು ಕೇಳಿ ಆ ಹುಡುಗಿ ಕೊಠಡಿಯ ಬಾಗಿಲು ಹಾಕಿಕೊಂಡು ಗೋವಿಂದನನ್ನು ಕರೆಯುತ್ತಾ ಅಳಲಾರಂಭಿಸಿದಳು. 'ಓ ಗೋವಿಂದ, ದಯವಿಟ್ಟು ಬಾ! ಕೃಪೆಯಿಟ್ಟು ನಿನ್ನ ದರ್ಶನ ಕೊಡು! ನೀನು ಏಕೆ ಬರುತ್ತಿಲ್ಲ ಹೇಳು?' ಆ ಚಿಕ್ಕ ಹುಡುಗಿಯ ಹೃದಯ ವಿದ್ರಾವಕ ಅಳುವನ್ನು ನೋಡಿ ಆಕೆಗೆ ಭಗವಂತ ದರ್ಶನ ಕೊಡದೆ ಇರಲಾಗಲಿಲ್ಲ. ಆದ್ದರಿಂದ ಆಕೆಗೆ ದರ್ಶನವಿತ್ತ.

ಮಗುವಿನಂಥ ವಿಶ್ವಾಸ ಬೇಕು. ಮಗು ತಾಯಿಯನ್ನು ನೋಡಲು ಯಾವ ರೀತಿಯಾದ ವ್ಯಾಕುಲತೆಯನ್ನು ತೋರಿಸುವುದೊ, ಆ ರೀತಿಯಾದ ವ್ಯಾಕುಲತೆ ಬೇಕು. ಅಂಥಾ ವ್ಯಾಕುಲತೆ ಉಂಟಾಯಿತು ಎಂದರೆ ಅರುಣೋದಯವಾದ ಹಾಗೆಯೇ. ಅರುಣೋದಯವಾದ ನಂತರ ಸೂರ್ಯೋದಯವಾಗಲೇಬೇಕು. ಅಂಥ ವ್ಯಾಕುಲತೆಯುಂಟಾದ ಒಡನೆಯೇ ಭಗವಂತನ ದರ್ಶನ ದೊರೆಯುತ್ತದೆ.

ಒಬ್ಬ ಬ್ರಾಹ್ಮಣನ ಮನೆಯಲ್ಲಿ ನಿತ್ಯವೂ ದೇವರ ಪೂಜೆ ನಡೆಯುತ್ತಿತ್ತು. ಒಂದು ದಿನ ಏನೋ ಕೆಲಸದ ನಿಮಿತ್ತ ಆ ಬ್ರಾಹ್ಮಣ ಬೇರೆ ಸ್ಥಳಕ್ಕೆ ಹೋಗಿ ಬರಬೇಕಾಗಿ ಬಂತು. ಆತ ತನ್ನ ಚಿಕ್ಕ ಮಗನಿಗೆ ಹೇಳಿಹೋದ: 'ನೀನು ಇಂದು ದೇವರಿಗೆ ನೈವೇದ್ಯ ಅರ್ಪಿಸಿ ಊಟ ಮಾಡಿಸು.' ಹುಡುಗ ದೇವರಿಗೆ ನೈವೇದ್ಯವನ್ನು ಅರ್ಪಿಸಿದ . ಆದರೆ ದೇವರು ಮಾತ್ರ ಸುಮ್ಮನೆ ಕುಳಿತಿದ್ದಾನೆ. ಮಾತೂ ಆಡುತ್ತಿಲ್ಲ, ಊಟವೂ ಮಾಡುತ್ತಿಲ್ಲ. ಆ ಹುಡುಗ ಬಹಳ ಹೊತ್ತಿನವರೆಗೆ ಕುಳಿತು ನೋಡಿದ. ಆದರೂ ದೇವರು ಮಾತ್ರ ಮೇಲಕ್ಕೆ ಏಳಲೇ ಇಲ್ಲ. ಆ ಹುಡುಗ ನಂಬಿದ್ದ, ದೇವರು ಎದ್ದು ಬಂದು ಆಸನದ ಮೇಲೆ ಕುಳಿತುಕೊಂಡು ಊಟಮಾಡುತ್ತಾನೆ ಎಂದು. ಆಗ ಆ ಬಾಲಕ ಮತ್ತೆ ಮತ್ತೆ ಮೊರೆಯಿಡಲಾರಂಭಿಸಿದ: 'ಹೇ, ದೇವರೆ, ಆಸನದಲ್ಲಿ ಬಂದು ಕುಳಿತುಕೊಂಡು ಊಟ ಮಾಡು. ಈಗ ಆಗಲೆ ಬಹಳ ಹೊತ್ತಾಗಿಬಿಟ್ಟಿದೆ. ನನ್ನ ಕೈಯಲ್ಲಿ ಇನ್ನು ಕಾದು ಕುಳಿತಿರಲಾಗುವುದಿಲ್ಲ.' ಹೀಗೆ ಮೊರೆಯಿಟ್ಟರೂ ದೇವರು ಒಂದು ಮಾತನ್ನೂ ಆಡಲಿಲ್ಲ. ಇದನ್ನು ನೋಡಿ ಹುಡುಗ ರೋದಿಸುತ್ತ ಮತ್ತೆ ದೇವರಿಗೆ ಮೊರೆಯಿಡಲಾರಂಭಿಸಿದ; 'ದೇವರೆ, ನಮ್ಮ ತಂದೆ ನಿನಗೆ ಊಟಮಾಡಿಸುವಂತೆ ಹೇಳಿಹೋಗಿದ್ದಾರೆ. ಏತಕ್ಕೆ ನೀನು ಎದ್ದು ಬರುತ್ತಿಲ್ಲ? ನನ್ನ ಕೈಯಿಂದ ಏಕೆ ಊಟ ಮಾಡಲಿಚ್ಛಿಸುವುದಿಲ್ಲ?' ಆ ಹುಡುಗ ಈ ರೀತಿಯಾಗಿ ಅತ್ಯಂತ ವ್ಯಾಕುಲನಾಗಿ ಅಳಲಾರಂಭಿಸಿದ. ಸ್ವಲ್ಪ ಹೊತ್ತಿನಲ್ಲೇ ದೇವರು ಪೀಠದಿಂದ ನಗುತ್ತ ನಗುತ್ತ ಎದ್ದು ಬಂದು ಆಸನದ ಮೇಲೆ ಕುಳಿತುಕೊಂಡು ಊಟಮಾಡಲಾರಂಭಿಸಿದ. ಆ ಬಾಲಕ ದೇವರಿಗೆ ಊಟ ಮಾಡಿಸಿ ದೇವರ ಮನೆಯಿಂದ ಹೊರಗೆ ಬಂದ. ಮನೆಯವರು ಕೇಳಿದರು: 'ನೈವೇದ್ಯ ಅರ್ಪಿಸಿ ಆಯಿತೆ? ಹಾಗಾದರೆ ಎಲ್ಲವನ್ನೂ ತೆಗೆದುಕೊಂಡು ಬಂದುಬಿಡು.' ಆ ಬಾಲಕ ಹೇಳಿದ: 'ಹೌದು, ನೈವೇದ್ಯವನ್ನು ಅರ್ಪಿಸಿಯಾಯಿತು. ದೇವರು ಎಲ್ಲವನ್ನೂ ಊಟಮಾಡಿಬಿಟ್ಟ.' ಅದನ್ನು ಕೇಳಿ ಅವರು ಹೇಳಿದರು: 'ಅದು ಹೇಗೋ?' ಆ ಬಾಲಕ ತನ್ನ ಸರಳ ಬುದ್ಧಿಯಿಂದ ಹೇಳಿದ : 'ಏಕೆ, ದೇವರು ಊಟಮಾಡಿಬಿಟ್ಟ.'

**ಶ್ರೀರಾಮಕೃಷ್ಣ ವಚನವೇದ** ದಿಂದ